**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20** **ದಿನಾಂಕ : 04–09–2019**

## ಪತ್ರಿಕಾ ಆಮಂತ್ರಣ

**1.** ಉನ್ನತ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ಸರ್ಕಾರಿ ಕಾಲೇಜುಗಳ ಅಧ್ಯಾಪಕರ ಸಂಘ ವಿಶ್ವವಿದ್ಯಾಲಯ ಮತ್ತು ಕಾಲೇಜು ಶಿಕ್ಷಕರ ಒಕ್ಕೂಟದಿಂದ ಶಿಕ್ಷಕರ ದಿನಾಚರಣೆ :

ಉದ್ಘಾಟನೆ :

ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ :

ಗೋವಿಂದ ಕಾರಜೋಳ,
ಉಪ ಮುಖ್ಯಮಂತ್ರಿಗಳು, ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರು

ಲಕ್ಷ್ಮಣ ಸಂಗಪ್ಪ ಸವದಿ
ಉಪ ಮುಖ್ಯಮಂತ್ರಿಗಳು, ಹಾಗೂ ಸಾರಿಗೆ ಇಲಾಖೆ ಸಚಿವರು

ಡಾ : ಸಿ.ಎನ್. ಅಶ್ವಥ್ ನಾರಾಯಣ,
ಉಪ ಮುಖ್ಯಮಂತ್ರಿಗಳು, ಹಾಗೂ ಉನ್ನತ ಶಿಕ್ಷಣ, ಐಟಿ, ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಆಶಯ ನುಡಿ :

ಪ್ರೊ. ಪಿ. ವಿ ಕೃಷ್ಣಭಟ್,
ಕುಲಪತಿಗಳು, ಕೇಂದ್ರೀಯ ವಿಶ್ವವಿದ್ಯಾಲಯ, ಒಡಿಸ್ಸಾ ಹಾಗು ಖ್ಯಾತ ಶಿಕ್ಷಣ ತಜ್ಞರು

ದಿನಾಂಕ: 05–09–2019, ಗುರುವಾರ ಬೆಳಿಗ್ಗೆ 9–30 ಗಂಟೆಗೆ
ಸ್ಥಳ : ಬ್ಯಾಂಕ್ವೆಟ್ ಹಾಲ್, ವಿಧಾನ ಸೌಧ, ಬೆಂಗಳೂರು

2. ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತರಿಗೆ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ – 2019 :

ಕಾರ್ಯಕ್ರಮ ಉದ್ಘಾಟನೆ :

ಬಿ.ಎಸ್. ಯಡಿಯೂರಪ್ಪ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ :

ಎಸ್. ಸುರೇಶ್‌ಕುಮಾರ್,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಮುಖ್ಯ ಅತಿಥಿಗಳು :

ಡಾ : ಸಿ.ಎನ್. ಅಶ್ವತ್ಥ್ ನಾರಾಯಣ್,
ಉಪ ಮುಖ್ಯಮಂತ್ರಿಗಳು, ಹಾಗೂ ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಕೆ. ಪ್ರತಾಪಚಂದ್ರಶೆಟ್ಟಿ,
ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್,

ವಿಶ್ವೇಶ್ವರ ಹೆಗಡೆ ಕಾಗೇರಿ,
ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ,

ಆರ್. ಅಶೋಕ್,
ಕಂದಾಯ ಸಚಿವರು,

ವಿ. ಸೋಮಣ್ಣ,
ವಸತಿ ಸಚಿವರು

ದಿನಾಂಕ : 05–09–2019 ಗುರುವಾರ ಸಮಯ : ಬೆಳಿಗ್ಗೆ 10–30 ಗಂಟೆಗೆ

ಸ್ಥಳ : ಡಾ : ಬಿ.ಆರ್. ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಂಗಳೂರು – 560 052

3.  ಅಂತರ್  ಜಲ ಯೋಜನೆ, ನಿರ್ವಹಣೆ ಪುನರ್ ಬಳಕೆ ಮತ್ತು ನಿರಂತರ ಬಳಕೆ ಕುರಿತು ಅಂತರಾಷ್ಟ್ರೀಯ ಕಾರ್ಯಾಗಾರ

ಉದ್ಘಾಟನೆ :

ಪ್ರೊ. ಡೆಬೋರಾ ಸ್ವೀನೆ,  ಉಪಕುಲಪತಿಗಳು ವೆಸ್ಟನ್ ಸಿಡ್ನಿ ವಿಶ್ವವಿದ್ಯಾಲಯ ಆಸ್ಟ್ರೇಲಿಯಾ

ಮುಖ್ಯ ಅತಿಥಿಗಳು :

ಡಾ : ಶ್ರೀನಿವಾಸ ರೆಡ್ಡಿ,
ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು

ಡಾ : ವೈ.ಜಿ. ಷಡಾಕ್ಷರಿ, ಸಂಶೋಧನಾ ನಿರ್ದೇಶಕರು,
ಕೃಷಿ ವಿಶ್ವವಿದ್ಯಾಲಯ

ಡಾ: ಮಹಬಲೇಶ್ವರ ಹೆಗಡೆ,
ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ದಿನಾಂಕ : 05-9-2019 ಗುರುವಾರ ಬೆಳಿಗ್ಗೆ 9-30 ಗಂಟೆಗೆ

ಸ್ಥಳ : ನಾರ್ತ್ ಬ್ಲಾಕ್ ಸಭಾಂಗಣ, ಜಿಕೆವಿಕೆ, ಬೆಂಗಳೂರು

ವಿ.ಸೂ. ಅಂದು ಬೆಳಿಗ್ಗೆ 8-45 ಗಂಟೆಗೆ ಕಬ್ಬನ್ ಉದ್ಯಾನವನದಲ್ಲಿರುವ ಪ್ರೆಸ್ ಕ್ಲಬ್ ಆವರಣದಿಂದ ಮಾಧ್ಯಮ ಪ್ರತಿನಿಧಿಗಳಿಗೆ ವಾಹನ ವ್ಯವಸ್ಥೆ ಮಾಡಲಾಗಿದೆ.  ಹೆಚ್ಚಿನ ಮಾಹಿತಿಗೆ : ಡಾ : ಕೆ. ಶಿವರಾಮು, 9972035456 ಸಂಪರ್ಕಿಸಬಹುದು.

## ಪತ್ರಿಕಾ ಪ್ರಕಟಣೆ

### ಜಾತಿವಾದವನ್ನು ಸಾಮಾಜಿಕ ದೃಷ್ಟಿಯಿಂದ ನೋಡಿ, ರಾಜಕೀಯವಾಗಿ ಕಾಣಬೇಡಿ : ರಾಮದಾಸ್ ಅಥಾವಲೆ

ಬೆಂಗಳೂರು, ಸೆಪ್ಟೆಂಬರ್ 4 (ಕರ್ನಾಟಕ ವಾರ್ತೆ) :

ಜಾತಿವಾದವನ್ನು ಸಾಮಾಜಿಕ ದೃಷ್ಟಿಯಿಂದ ನೋಡಬೇಕೇ ಹೊರತು ಅದನ್ನು ಎಂದೂ ರಾಜಕೀಯ ವಿಷಯವಾಗಿ ಕಾಣಬಾರದು ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ರಾಮದಾಸ್ ಅಥಾವಲೆ ಅವರು ಇಲ್ಲಿ ಇಂದು ಅಭಿಪ್ರಾಯಟ್ಟರು.

ನಗರದ ಕುಮಾರ ಕೃಪಾ ನೂತನ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು ಕರ್ನಾಟಕದಲ್ಲಿ 2014–15 ನೇ ಸಾಲಿನಲ್ಲಿ 2041, 2015–16 ನೇ ಸಾಲಿನಲ್ಲಿ 1785, 2016–17 ನೇ ಸಾಲಿನಲ್ಲಿ 2145, 2017–18 ನೇ ಸಾಲಿನಲ್ಲಿ 4353, ಹಾಗೂ 2018–19 ನೇ ಸಾಲಿನಲ್ಲಿ 5273 ಅಂತರ್ಜಾತಿ ವಿವಾಹಗಳು ನಡೆದಿವೆ ಎಂಬುದು ಆಶಾದಾಯಕ ಸಂಗತಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ದಲಿತರ ವಿರುದ್ಧ 2015 ನೇ ಸಾಲಿನಲ್ಲಿ 3593 2016 ನೇ ಸಾಲಿನಲ್ಲಿ 3946, 2017 ನೇ ಸಾಲಿನಲ್ಲಿ 4329 ಹಾಗೂ 2018 ನೇ ಸಾಲಿನಲ್ಲಿ 5022 ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ ಎಂಬ ಆಘಾತಕಾರಿ ವಿಷಯವನ್ನು ಬಹಿರಂಗಪಡಿಸಿ ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ವಿಶೇಷ ನಿಗಾ ವಹಿಸಬೇಕು ಎಂದು ಸಲಹೆ ಮಾಡಿದರು.

ರಾಜ್ಯದ ಕೆಲವೆಡೆಗಳಲ್ಲಿ ಮಲಹೊರುವ ಪದ್ದತಿ ಇನ್ನೂ ಜೀವಂತವಾಗಿದೆ ಎಂಬ ಬಗ್ಗೆ ಕಳವಳ ವ್ಯಕ್ತಪಡಿಸಿದ ಸಚಿವರು ಸ್ಥಳೀಯ ಸಂಸ್ಥೆಗಳು ಈ ಬಗ್ಗೆ ತೀವ್ರ ಗಮನಹರಿಸಿ ಮಲಗುಂಡಿಗಳನ್ನು ಯಾಂತ್ರಿಕವಾಗಿ ಶುಚಿಗೊಳಿಸುವತ್ತ ಕಾರ್ಯೋನ್ಮುಖವಾಗಬೇಕು. ಈ ನಿಟ್ಟಿನಲ್ಲಿ ಅಗತ್ಯ ಉಪಕರಣಗಳನ್ನು ಖರೀದಿಸಲು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯವು ಸ್ಥಳೀಯ ಸಂಸ್ಥೆಗಳಿಗೆ ಶೇಕಡಾ 4 ರ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸಲಿದೆ ಎಂದು ಅವರು ಮಾಹಿತಿ ನೀಡಿದರು.

ಜಮ್ಮು, ಕಾಶ್ಮೀರ ಮತ್ತು ಲಡಾಖ್‌ಗಳಲ್ಲಿ ಕರ್ನಾಟಕದ ಕಾರ್ಪೋರೇಟ್ ಸಂಸ್ಥೆಗಳು ತಮ್ಮ ಘಟಕಗಳನ್ನು ಸ್ಥಾಪಿಸಬೇಕು. ಅಂತೆಯೇ, ಹೋಟೆಲ್ ಉದ್ಯಮಕ್ಕೆ ಹೆಸರಾದ ಕರ್ನಾಟಕದವರು ಈ ಪ್ರದೇಶದಲ್ಲಿ ಹೋಟೆಲ್‌ಗಳನ್ನು ಸ್ಥಾಪಿಸಿದಲ್ಲಿ ಕಣಿವೆಯ ಪ್ರವಾಸೋದ್ಯಮಕ್ಕೆ ಮತ್ತಷ್ಟು ಪುಷ್ಟಿ ನೀಡಬೇಕು ಎಂದು ಸಚಿವರು ಮನವಿ ಮಾಡಿದರು.

## ಪತ್ರಿಕಾ ಪ್ರಕಟಣೆ

### ತಾಂಡಾಗಳಿಗೆ ಸಂಚಾರಿ ವಾಹನಗಳ ಮೂಲಕ ಮದ್ಯ ಮಾರಾಟ

ಬೆಂಗಳೂರು, ಸೆಪ್ಟೆಂಬರ್ 4 (ಕರ್ನಾಟಕ ವಾರ್ತೆ)

ಕಡಿಮೆ ಜನಸಂದಣಿ ಇರುವ ತಾಂಡಾಗಳಿಗೆ ಮೊಬೈಲ್ ವಾಹನಗಳ ಮೂಲಕ ಮದ್ಯ ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಅಬಕಾರಿ ಸಚಿವ ಹೆಚ್. ನಾಗೇಶ್ ಅವರು ತಿಳಿಸಿದರು.

ಅವರು ಇಂದು ವಿಕಾಸಸೌಧದ ಸಮ್ಮೇಳನ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಅವರು ಇಂದು ಅಬಕಾರಿ ಇಲಾಖೆಯ ಬೆಂಗಳೂರು ಹಾಗೂ ಎಲ್ಲ ಜಿಲ್ಲೆಗಳ ಹಿರಿಯ ಅಧಿಕಾರಿಗಳೊಂದಿಗೆ ಸಭೆಯನ್ನು ಸಹ ನಡೆಸಿ ಪ್ರಗತಿ ಪರಿಶೀಲನೆ ನಡೆಸಿದರು.

2018–19 ನೇ ಸಾಲಿಗೆ ಇಲಾಖೆಯಲ್ಲಿ 19,943.93 ಕೋಟಿ ರೂ. ಗಳು ಖರ್ಚಾಗಿದ್ದು ನಿಗದಿತ ಗುರಿ ಸಾಧಸಲಾಗಿದೆ. 2019–20 ನೇ ಸಾಲಿಗೆ ಆರ್ಥಿಕ ಗುರಿ 20,950 ಕೋಟಿ ನಿಗದಿಪಡಿಸಲಾಗಿದ್ದು, ಆಗಸ್ಟ್ ಅಂತ್ಯಕ್ಕೆ 9099.56 ಕೋಟಿಗಳು ಗುರಿಯನ್ನು ಸಾಧಿಸಲಾಗಿದೆ. 2019–19 ನೇ ಸಾಲಿನಲ್ಲಿ 569.52 ಲಕ್ಷ ಪೆಟ್ಟಿಗೆಗಳು (ಭಾರತೀಯ ತಯಾರಿಕ ಮದ್ಯ) ,300.85 ಲಕ್ಷ ಪೆಟ್ಟಿಗೆಗಳ ಬಿಯರ್ ಮಾರಾಟವಾಗಿದ್ದು, ಪ್ರಸಕ್ತ 2019–20 ನೇ ಸಾಲಿನ ಆಗಸ್ಟ್ ಅಂತ್ಯಕ್ಕೆ 229.35 ಲಕ್ಷ ಮದ್ಯ ಪೆಟ್ಟಿಗೆ ಹಾಗೂ 119.71 ಲಕ್ಷ ಬಿಯರ್ ಪೆಟ್ಟಿಗೆ ಮಾರಾಟ ಮಾಡಲಾಗಿದೆ ಎಂದರು.

2018–19 ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಲ್ಲಿ ದಾಳಿ ಹಾಗೂ ತನಿಖಾ ಚಟುವಟಿಕೆಗಳಲ್ಲಿ 46,676 ಪ್ರಕರಣಗಳನ್ನು ದಾಖಲಿಸಿದ್ದು 29,660 ಆರೋಪಿಗಳನ್ನು ಬಂದಿಸಲಾಗಿದೆ ಹಾಗೂ 1770 ವಾಹನಗಳನ್ನು ವಶಪಡಿಸಿ 20.90 ಕೋಟಿ ದಂಡ ವಸೂಲಿ ಮಾಡಲಾಗಿದೆ. 2019 ನೇ ಸಾಲಿನ ಆಗಸ್ಟ್ ಅಂತ್ಯಕ್ಕೆ ತನಿಖಾ ಚಟುವಟಿಕೆಗಳಲ್ಲಿ 4993 ಪ್ರಕರಣಗಳನ್ನು ದಾಖಲಿಸಿದ್ದು, 3312 ಆರೋಪಿಗಳನ್ನು ಬಂಧಿಸಿ, 62 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಜುಲೈ ತಿಂಗಳು ಒಂದರಲ್ಲೇ 61.32 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದರು.

ಅಬಕಾರಿಯಲ್ಲಿ ಆನ್‌ಲೈನ್ ಮೂಲಕ ಸನ್ನದುಗಳನ್ನು ನವೀಕರಣ ಮಾಡಲಾಗಿದೆ. 2018–19 ರಲ್ಲಿ 9850 ಚಿಲ್ಲರೆ ಮಾರಾಟಗಾರರಿಗೆ ಹಾಗೂ 2019–20 ನೇ ಸಾಲಿನಲ್ಲಿ 60 ಮದ್ಯ ಉತ್ಪಾದನಾ ಘಟಕಗಳಿಗೆ ಆನ್‌ಲೈನ್ ಮೂಲಕ ಸನ್ನದು ನವೀಕರಣ ಮಾಡಲಾಗಿದೆ. ಅಲ್ಲದೆ ಈ ವರ್ಷ 409 ಹೊಸ ಸನ್ನದು ಮಳಿಗೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ ಎಂದರು.

ಅಕ್ರಮ ಮದ್ಯ ಮಾರಾಟ, ತಯಾರಿಕೆಯನ್ನು ತಡೆಯಲು ಅಧಿಕಾರಿಗಳು ದಿಡೀರ್ ಭೇಟಿ ದಾಳಿಗಳನ್ನು ನಡೆಸುತ್ತಿದ್ದಾರೆ. ಹೆದ್ದಾರಿ ಹಾಗೂ ಹೋಟೆಲ್‌ಗಳಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ತಡೆ ನೀಡಲು ನಿರ್ದೇಶನ ನೀಡಲಾಗಿದೆ. ಸುರಕ್ಷಿತ ಕಲಬೆರಕೆ ರಹಿತ ಮದ್ಯವನ್ನು ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಕಾನೂನು ಬದ್ಧವಾದ ಮದ್ಯ ಮಾರಾಟಕ್ಕೆ ಉತ್ತೇಜನ ನೀಡುವುದು ಇಲಾಖೆಯ ಗುರಿ. ಇದರಿಂದ ರಾಜ್ಯದ ಬೊಕ್ಕಸಕ್ಕೆ ಸಹ ಇಲಾಖೆಯಿಂದ ಹೆಚ್ಚು ಲಾಭ. ಅಬಕಾರಿ ಅಪರಾಧಗಳನ್ನು ನಿಯಂತ್ರಿಸಲು ಸಹ ಕ್ರಮ ಕೈಗೊಳ್ಳಲಾಗುವುದು. ಇಲಾಖೆಯಲ್ಲಿ ತರಬೇತಿ ಕಾರ್ಯಕ್ರಮ ನಡೆಸಿ ಖಾಲಿ ಹುದ್ದೆಗಳ ಭರ್ತಿಗೆ ಸಹ ಸಹಕಾರ ನೀಡಲಾಗುವುದು ಎಂದರು.

## ವಸತಿ ಸಚಿವರ ಪರಿಷ್ಕೃತ ಪ್ರವಾಸ ವಿವರ

ಬೆಂಗಳೂರು, ಸೆಪ್ಟೆಂಬರ್ 4 (ಕರ್ನಾಟಕ ವಾರ್ತೆ)

ವಸತಿ ಸಚಿವ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಸೆಪ್ಟೆಂಬರ್ 5 ರಂದು ಬೆಳಿಗ್ಗೆ 11–00 ಗಂಟೆಗೆ ಕಲಾಮಂದಿರ ಹುಣಸೂರು ರಸ್ತೆ, ಮೈಸೂರು ಇಲ್ಲಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಅದೇ ದಿನ ಮಧ್ಯಾಹ್ನ 1–00 ಗಂಟೆಗೆ ದಸರಾ ಸಹಾಯವಾಣಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಜೆ ಕೇಂದ್ರಸ್ಥಾನಕ್ಕೆ ಹಿಂತಿರುಗಲಿದ್ದಾರೆ.

Photo Caption:

Today's press conference at the end of 4TH General Assembly of Association of World Election Bodies (A-WEB) & Conference.

Present on the Dais:
Mr. Sunil Arora, CEC ECI and Chair A-WEB
Mr. Glen Vuma Mashinini, Vice Chairperson A-WEB & EC of South Africa
Mr. Jonghyun Choe, Secretary General A-WEB, Republic of Korea
Mr. Ashok Lavasa, Hon’ble EC, India
Mr. Sushil Chandra, Hon’ble EC, India
Mr. Umesh Sinha, Sr DEC
Mr. Sanjiv Kumar, CEO, Karnataka
Ms. S Sharan, Spokesperson, ECI